2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸೆಷನ್ಸ್ ಕೇಸು ನಂಃ 35/2019</u>

| | | |
|---|---|---|
| ಸಾಕ್ಷಿದಾರರ ಹೆಸರು | - ಈರಪ್ಪ | ಪಿಡಬ್ಲೂ -19 |
| ತಂದೆಯ ಹೆಸರು | - ಮುರುಗಪ್ಪ | ಸಿಡಬ್ಲೂ -13 |
| ವಯಸ್ಸು | - 68 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಬೆಂಕಿಕೆರೆ, ಚನ್ನಗಿರಿ ತಾ. | |

ದಿನಾಂಕಃ 10.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದ ಮುಂದಿರುವ 1 ರಿಂದ 4 ನೇ ಆರೋಪಿತರು ನಮ್ಮ ಊರಾದ ಬೆಂಕಿಕೆರೆಯಲ್ಲಿ ನನ್ನ ಮನೆ ಪಕ್ಕದವರು. ಮೃತ ರುದ್ರಸ್ವಾಮಿ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಪೋಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

2. ದಿಃ 19.01.2019 ರಂದು ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 07.11.2018 ರಂದು ಬೆಳಿಗ್ಗೆ ಸುಮಾರು 10.30 ಗಂಟೆಗೆ ಕೆಎ-04/ಎಂ.ಜೆ.3487 ನಂಬರಿನ ಒಂದು ಕಾಫಿ ಬಣ್ಣದ ಕಾರಿನಲ್ಲಿ ಗಡ್ಡ ಬಿಟ್ಟಿದ್ದ ಒಬ್ಬ ವ್ಯಕ್ತಿ 2 ನೇ ಆರೋಪಿಯವರ ಮನೆಗೆ ಬಂದಿದ್ದು, ಕಾರನ್ನು ಅವರನ್ನು ಮನೆಯ

ಮುಂದೆ ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿವಸ ಮದ್ಯಾಹ್ನ 3.30 ಗಂಟೆಗೆ 1 ಹಾಗೂ 4 ನೇ ಆರೋಪಿತರು ಸದರಿ ವ್ಯಕ್ತಿಯ ಜೊತೆ ಕಾರಿನಲ್ಲಿ ಹೋದರು ಎಂದರೆ ಸರಿಯಲ್ಲ. ನಂತರ ವಾಪಾಸ್ಸು ಬರಲಿಲ್ಲ ಎಂದರೆ ಸರಿಯಲ್ಲ.

3. ಇದಾದ 4-5 ದಿನಗಳ ನಂತರ ಟಿವಿ ಮತ್ತು ಪೇಪರಿನಲ್ಲಿ ಬುಕ್ಕಾಂಬುದಿ ಸಮೀಪದ ಬುಕ್ಕರಾಯನ ಕೆರೆಯಲ್ಲಿ ರುಂಡವಿಲ್ಲದ ಶವ ಪತ್ತೆಯಾಗಿತ್ತು ಆತ ಕೆಂಗಟ್ಟೆ ಗ್ರಾಮದ ರುದ್ರಶೆಟ್ಟಿ ಎಂದು, ಆತನು ಬೆಂಗಳೂರಿನಲ್ಲಿ ವಾಸವಾಗಿದ್ದು, 1 ನೇ ಆರೋಪಿ ಮತ್ತು ಅವಳ ಗಂಡನಿಗೆ ರುದ್ರಸ್ವಾಮಿ ಪರಿಚಯ ಮಾಡಿಕೊಟ್ಟು ನಂತರ 1 ನೇ ಆರೋಪಿತಳೊಂದಿಗೆ ಪೋಟೋ ತೆಗೆಸಿಕೊಂಡು ಅದನ್ನು ಅವಳ ಗಂಡನಿಗೆ ತೋರಿಸಿ, ಪೇಸ್ ಬುಕ್ಕಿನಲ್ಲಿ ಹಾಕುತ್ತೇನೆಂದು 1 ನೇ ಆರೋಪಿಗೆ ಕಿರುಕುಳ ನೀಡುತ್ತಿದ್ದುದರಿಂದ, ಸದರಿ ವಿಷಯವನ್ನು 1 ನೇ ಆರೋಪಿ ಇತರೆ ಆರೋಪಿತರಿಗೆ ತಿಳಿಸಿದ್ದರಿಂದ ದಿಃ 07.11.2018 ರಂದು ಆರೋಪಿತರು ರುದ್ರಸ್ವಾಮಿಯನ್ನು ಬೆಂಕಿಕೆರೆಗೆ ಕರೆಸಿಕೊಂಡು ಮೇಲೆ ತಿಳಿಸಿದ ಕಾರಿನಲ್ಲಿ ಆತನನ್ನು ತೋಟಕ್ಕೆ ಕರೆದುಕೊಂಡು ಹೋಗಿ ಆರೋಪಿತರೆಲ್ಲರು ಸೇರಿಕೊಂಡು ಮಚ್ಚು ಮತ್ತು ಕುಡುಗೋಲಿನಿಂದ ರುದ್ರಸ್ವಾಮಿಯ ಕುತ್ತಿಗೆಯನ್ನು ಕಡಿದು ರುಂಡ ಮುಂಡ ಬೇರ್ಪಡಿಸಿ ಗೋಣಿಚೀಲದಲ್ಲಿ ತುಂಬಿಕೊಂಡು ಮೃತನನ್ನು ಕಾರಿನಲ್ಲಿ ಬುಕ್ಕಾಂಬುದಿ ಕೆರೆಗೆ ತಂದು ಎಸೆದಿರುತ್ತಾರೆ ಎಂದು ತಿಳಿದಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.27 ಎಂದು ಗುರುತಿಸಲಾಯಿತು.

4. ಆರೋಪಿತರು ನನ್ನ ಪಕ್ಕದ ಮನೆಯವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ತಮ್ಮದೇನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾದ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ